# ದುಷ್ಯಂತನ ಸಂಕಟ; ಸೂಜಿದಾರದ ಸಂತಸ

ಕಥೆಗಾರನಾಗಿ, ರಂಗಕರ್ಮಿಯಾಗಿ ಗಮನಸೆಳೆದಿರುವ ಮೌನೇಶ ಬಡಿಗೇರ್ ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ ಪುರಸ್ಕೃತರು. ಈಗ ನಿರ್ದೇಶನದ ಮೂಲಕ ತಮ್ಮ ಪ್ರತಿಭೆಯನ್ನು ಸಿನಿಮಾ ಮಾಧ್ಯಮದಲ್ಲಿ ಒರೆಗೆ ಹಚ್ಚಿಕೊಳ್ಳುತ್ತಿದ್ದಾರೆ. ಅವರು ನಿರ್ದೇಶಿಸಿರುವ, ಹರಿಪ್ರಿಯಾ ನಾಯಕಿಯಾಗಿ ನಟಿಸಿರುವ 'ಸೂಜಿದಾರ' ಮೇ 10ಕ್ಕೆ ಬಿಡುಗಡೆಯಾಗಲಿದೆ. ಸಾಹಿತ್ಯ, ರಂಗಭೂಮಿ, ಸಿನಿಮಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವರು 'ಸುಧಾ' ಜೊತೆ ಮಾತನಾಡಿದ್ದಾರೆ.

■ ಪದ್ಮನಾಭ ಭಟ್



ಚಿತ್ರಗಳು:
ಕೆ.ಎಸ್.ನಾಗೇಶ್ ಕುಮಾರ್

◆ **ರಂಗಭೂಮಿ ಬಗ್ಗೆ ನಿಮಗೆ ಆಸಕ್ತಿ ಮೊಳೆತಿದ್ದು ಹೇಗೆ?**

ನನಗೆ ರಂಗಭೂಮಿಯಲ್ಲಿ ಆಸಕ್ತಿ ಬಂದಿದ್ದು ನನ್ನ ಅಣ್ಣ ಮಂಜುನಾಥ್ ಬಡಿಗೇರ್ ಮೂಲಕ. ಆದರೆ ಅದಕ್ಕಿಂತ ಮೊದಲು ನನಗೆ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿತ್ತು.

ಡಿಪ್ಲೊಮಾ ಓದ್ತಿದ್ದೆ. ಅಂತಿಮ ವರ್ಷ ಫೇಲ್ ಆದೆ. ಆಗ ಒಂದು ರೀತಿಯ ವಿಚಿತ್ರ ಗ್ಯಾಪ್ ನನ್ನ ಬದುಕಿನಲ್ಲಿ ಎದುರಾಯ್ತು. ಏನು ಮಾಡಬೇಕು ಗೊತ್ತಾಗುತ್ತಿರಲಿಲ್ಲ. ಆ ಸಮಯದಲ್ಲಿ ಸಾಹಿತ್ಯದ ಮೇಲೆ ಆಸಕ್ತಿ ಹುಟ್ಟಿತು. ಬೆಂಗಳೂರಿನ ಬಿಟಿಎಂ ಲೇಔಟ್ ಪಬ್ಲಿಕ್ ಗ್ರಂಥಾಲಯದಲ್ಲಿ ದಿನವೂ ಹೋಗಿ ಕೂತು ಓದುವುದೇ ಕೆಲಸವಾಗಿತ್ತು. ಗಿರೀಶ್ ಕಾಸರವಳ್ಳಿ ಅವರ ಮನೆಯ ಎದುರುಗಡೆಯೇ ಆ ಲೈಬ್ರರಿ ಇತ್ತು. ಅವರೂ ಲಂಕೇಶ್ ಪತ್ರಿಕೆ ಓದೋಕೆ ಅಲ್ಲಿಗೆ ಬರುತ್ತಿದ್ದರು. ಆ ದಿನಗಳಲ್ಲಿಯೇ ನಾನು ಬರವಣಿಗೆಗೂ ತೊಡಗಿಕೊಂಡಿದ್ದು. ಏನೇನೋ ಬರೆಯುತ್ತಿದ್ದೆ. ನಾನು ಬರೆದಿದ್ದನ್ನು ಓದಿ ನಾನೇ ರೋಮಾಂಚನಗೊಳ್ಳುತ್ತಿದ್ದೆ. ಸುಮಾರು ಕಥೆಗಳನ್ನೂ ಬರೆದಿದ್ದೆ. ಭಿಕ್ಷುಕರನ್ನು ನೋಡಿದರೆ ಅವರ ಮೇಲೊಂದು ಕಥೆ; ವೇಶ್ಯೆಯರನ್ನು ನೋಡಿದರೆ ಅವರ ಮೇಲೊಂದು ಕಥೆ. ಅದರ ತಾತ್ವಿಕ ನೆಲೆಗಟ್ಟುಗಳೆಲ್ಲ ಗೊತ್ತಿಲ್ಲ; ಸುಮ್ಮನೆ ನೋಡಿದ್ದರ ಮೇಲೆಲ್ಲ ಕಥೆ ಬರೆಯುವುದು.

ನಂತರದ ದಿನಗಳಲ್ಲಿ ಬೀದಿನಾಟಕಗಳಲ್ಲಿ ತೊಡಗಿಕೊಂಡೆ. ನಿರ್ದೇಶಕ ಜಯತೀರ್ಥ ಆಗ 'ಮಾಧ್ಯಮ್' ಎಂಬ ಎನ್‌ಜಿಓದಲ್ಲಿ ಕೆಲಸ ಮಾಡುತ್ತಿದ್ದರು. ಅವರ ಆಫೀಸೇ ನನಗೆ, ಬಿ.ಎಂ. ಗಿರಿರಾಜ್ ಅವರಿಗೆಲ್ಲ ಅಡ್ಡ. ಅಲ್ಲಿ ಸೇರುವುದು, ಮಾತಾಡುವುದು, ಬೀದಿನಾಟಕಗಳನ್ನು ರೂಪಿಸುವುದು ಎಲ್ಲ ಮಾಡುತ್ತಿದ್ದೆವು. ನಾವೆಲ್ಲ ನಿರುದ್ಯೋಗಿಗಳು. ಏನು ಮಾಡಬೇಕೆಂದೂ ಗೊತ್ತಿಲ್ಲ. ಜಯತೀರ್ಥ ಒಬ್ಬರೇ ಅಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೂ ನಮ್ಮಂಥವರೇ ಬೇಕಿದ್ದರು. ಕ್ರಮೇಣ ನಾನೂ ಯಾಕೆ ನೀನಾಸಮ್‌ಗೆ ಹೋಗಬಾರದು ಎನಿಸಿ ಹೋದೆ.

◆ **ನಿಮ್ಮ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ನೀನಾಸಮ್‌ನ ಪ್ರಭಾವ ಎಷ್ಟಿದೆ?**

ನೀನಾಸಮ್‌ಗೆ ಹೋದಮೇಲೆ ನನ್ನಲ್ಲಿ ಬೇರೆ ಥರದ ರೂಪಾಂತರ ಆಯಿತು. ಯಾಕೆಂದರೆ ಅದುವರೆಗೆ ನಾನು ಬೆಂಗಳೂರು ಬಿಟ್ಟು,